ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 1, March-April 2023, Pp. 134-136
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬದುಕಿನ ನೆಲೆಗೆ ಬೆಲೆ ತಂದು ಕೊಡುವ ಮೊಹರಂ ಪದಗಳು

**ಮಕ್ಬೂಲ್ ಪಾಶಾ ಮಹ್ಮದ್**
ಸಂಶೋಧಕರು, ಕನ್ನಡ ಅಧ್ಯಯನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

***Abstract:***
*ಭಾರತ ದೇಶವು ಸಂಪತ್‌ಭರಿತವಾದ ದೇಶವಾಗಿರುವುದರ ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ ಧಾರ್ಮಿಕ ವೈವಿಧ್ಯತೆಯನ್ನು ಹೊಂದಿರುವ ರಾಷ್ಟ್ರವಾಗಿದೆ. ಭಾರತದ ನೆಲಮೂಲ ಆಚರಣೆಗಳು ಇತರ ಆಚರಣೆಗಳೊಂದಿಗೆ ಬೆರೆತು ಪರಸ್ಪರ ದ್ವೇಷ ಅಸೂಯೆ ವೈಷಮ್ಯ ಮರೆತು ಒಂದಾಗಿ ಬಾಳುವಂತೆ ಮಾಡಿರುವುದು ನಮ್ಮ ದೇಶದ ಹೆಗ್ಗಳಿಕೆಯಾಗಿದೆ. ಭಾರತೀಯ ಪರಂಪರೆಯಲ್ಲಿ ಬರುವ ಸಾಲು–ಸಾಲು ಜಾತ್ರೆ ಮತ್ತು ಹಬ್ಬಗಳು ಸಮುದಾಯಗಳ ನಡುವೆ ಭಾವೈಕ್ಯತೆಯನ್ನು ಮೂಡಿಸುವಲ್ಲಿ ಯಶಸ್ವಿಯಾಗಿವೆ. ಭಾವೈಕ್ಯತೆಯ ನೆಲೆಯೊಂದಿಗೆ ಹಿಂದು–ಮುಸ್ಲಿಂ ಭೇದವೆನಿಸದೇ ಆಚರಿಸಿಕೊಳ್ಳುವ ಹಬ್ಬಗಳಿಗೆ ಇಲ್ಲಿ ತುಂಬಾ ಮಹತ್ವವಿದೆ ಅಂತಹ ಆಚರಣೆಗಳು ಪ್ರಾಮುಖ್ಯತೆ ಹೆಚ್ಚಾಗಬೇಕು. ಏಕೆಂದರೆ ಆಧುನಿಕ ಜಗತ್ತು ಇಂದು ಅಶಾಂತಿಯ ತಾಣವಾಗಿ ಕೈಗಾರೀಕರಣ, ನಗರೀಕರಣ ಜಾಗತೀಕರಣದ ಭರಾಟೆಯಲ್ಲಿ ಎಲ್ಲವನ್ನೂ ಮರೆಯುತ್ತಿರುವ ನಾಗರಿಕರಿಗೆ ನಮ್ಮ ನೆಲದ ಆಚರಣೆಗಳು, ಹಬ್ಬಗಳು, ಉತ್ಸವಗಳು ನಮ್ಮತನ ಗಟ್ಟಿಗೊಳಿಸುವ ನೆಲೆಯಲ್ಲಿ ಅವು ಆಚಾರಿಸುವಂತಾದರೆ ನಮ್ಮ ಸಂಸ್ಕೃತಿ ಆಚಾರ–ವಿಚಾರ ಪರಂಪರೆಗಳು ತಾವಾಗಿಯೇ ಮುಂದುವರೆಯುತ್ತವೆ.*

***Keywords:*** *ಭಾರತೀಯ ಸಂಸ್ಕೃತಿ, ಭಾವೈಕ್ಯತೆ, ಮೊಹರಂ ಪದಗಳು, ಸಾಂಸ್ಕೃತಿಕ ಆಚರಣೆಗಳು.*

**ಪೀಠಿಕೆ**

ಸಂತ ಶಿಶುನಾಳ ಶರೀಫರಿಗೆ ಗುರು ಗೋವಿಂದ ಭಟ್ಟರು ಕೊಟ್ಟ ದೀಕ್ಷೆಯ ನಂತರ ಭಾರತದ ಧಾರ್ಮಿಕತೆಯಲ್ಲಿ ಮಹತ್ವದ ಬದಲಾವಣೆಯಾ ಯಿತು. ಬುದ್ಧ ಮತ್ತು ಬಸವಣ್ಣನ ಕಾಲದಲ್ಲಿ ಕ್ರಾಂತಿಕಾರಕ ಬದಲಾವಣೆಯಾಯಿತು. ಡಾ. ಬಾಬಾ ಸಾಹೇಬ ಅಂಬೇಡ್ಕರವರ ಕಾಲದಲ್ಲಿ ಈ ಮಹಾ ನಾಯಕರ ಆಶಯಗಳು ಭಾರತದ ನೆಲದಲ್ಲಿ ಜನಿಸಿದ ಅನೇಕ ಸಂತರು ಸಾಧುಗಳು ಸತ್ಪುರುಷರು, ದಾಸರು, ತತ್ವಪದಕಾರರು, ಮೊಹರಂ ಪದಕಾರರು ನೆಲದ ಜೀವಂತಿಕೆಯಾದ ಜನಪದರು ಎಲ್ಲರ ಆಶಯಗಳು ಒಂದೇಯಾಗಿತ್ತು. ಬದುಕಿನ ನೆಲೆಗೆ ಬೆಲೆ ತಂದು ಕೊಡುವುದು ಮೌಲ್ಯಯುತ ಬದುಕು ನಡೆಸುವುದು ಹಾಗಾಗಿ ಅನೇಕ ರೀತಿಯ ವಚನ, ತತ್ವಪದ, ಜನಪದ, ಮುಂತಾದ ಸಾಹಿತ್ಯ ಜನರನ್ನು ಎಚ್ಚರಿಸಿದೆ.

ಇಂತಹ ಅನೇಕ ಸಾಹಿತ್ಯ ಪ್ರಕಾರದ ಹಾಡುಗಳಲ್ಲಿ ಮೊಹರಂ ಹಬ್ಬ ಆಚರಣೆಯ ಸಂದರ್ಭದಲ್ಲಿ ಹಾಡುವ ಹಾಡುಗಳು ಕುಣಿತ, ಆಚರಣೆ, ಭಕ್ತಿ–ಭಾವದ ಅರ್ಪಣೆ ಬಲು ವಿಶಿಷ್ಟತೆಯನ್ನು ಪಡೆದುಕೊಳ್ಳುತ್ತದೆ. ಮೊಹರಂ ಪದಗಳ ಶೈಲಿ, ಭಾಷೆ, ದಾಟಿ, ಹಾಡಿನೊಂದಿಗಿನ ಅಲಾವಿ ಕುಣಿತ, ಹಿಮ್ಮೇಳ, ಕಾಲಿಗೆ ಗೆಜ್ಜೆ ಕಟ್ಟಿಕೊಂಡು ತಾಳಕ್ಕೆ ತಕ್ಕಂತೆ ಹೆಜ್ಜೆಹಾಕುತ್ತಾ ಕುಣಿಯುವ ರೀತಿ ದೇವರ

***Please cite this article as:*** ಮಕ್ಬೂಲ್ ಪಾಶಾ ಮಹ್ಮದ್. (2023). ಬದುಕಿನ ನೆಲೆಗೆ ಬೆಲೆ ತಂದು ಕೊಡುವ ಮೊಹರಂ ಪದಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(1), 134–136.

ಮಸೀದಿಯ ಮುಂದೆ ಹಾಡುವ ಸಂಪ್ರದಾಯ ಎಲ್ಲವೂ ಜನಮನವನ್ನು ತಣಿಸುತ್ತದೆ. ಮುಖ್ಯವಾಗಿ ಮೊಹರಂ ಪದಗಳು ರಚನೆಯ ಭಾಷೆ ಸ್ಥಳಿಯ ಭಾಷೆಯಲ್ಲಿ ಸ್ಥಳಿಯರಿಂದ ರಚನೆಗೊಂಡು ವಾಸ್ತವ ಸಂಗತಿಗಳ ಅನಾವರಣದ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ವ್ಯಂಗ್ಯ ಧಾರ್ಮಿಕ ಎಲ್ಲಾ ವಿಷಯ ಸಂಬಂಧಿತ ಹಾಡುಗಳು ರಚನೆಗೊಂಡಿರುವುದನ್ನು ಕಾಣುತ್ತೇವೆ. ಹಾಗಾಗಿ ಸ್ಥಳಿಯ ಭಾಷೆಯ ಜನರ ಬದುಕಿಗೆ ಬಲು ಹತ್ತಿರದ ಬದುಕಿನ ರೀತಿ–ನೀತಿ ಜಗತ್ತಿನ ಆಗು–ಹೋಗುಗಳು ಹಾಡಿನಲ್ಲಿ ಕಟ್ಟಿಕೊಡುವ ರೀತಿ ಅದ್ಭುತವಾದದ್ದು.

ಆರಂಭದ ಮೊಹರಂ ಆಚರಣೆಯಲ್ಲಿ ಹೆಚ್ಚು–ಹೆಚ್ಚು ಹಾಡುಗಳು ಹಸನ–ಹುಸೇನರ ಬೀಬಿಫಾತಿಮರ, ಕರ್ಬಲಾ ಕದನದ ಹಾಡುಗಳಾಗಿದ್ದವು ಬರು–ಬರುತ್ತಾ ಹಿಂದು–ಮುಸ್ಲಿಂ ಭಾವೈಕ್ಯತೆಯ ಆಚರಣೆಯಾಗಿ ಬದಲಾವಣೆ ಗೊಂಡಾಗ ಅದು ಎಲ್ಲಾ ಪ್ರಕಾರದ ವಿಷಯಗಳಲ್ಲಿ ಹಾಡುಗಳು ರಚನೆಗೊಂಡು ಇಂದು ದೇಶ–ವಿದೇಶಗಳಲ್ಲಿ ಮೊಹರಂ ಪದಗಳು ಕೇಳುವವರಿದ್ದಾರೆ ಎಂದು ಖ್ಯಾತ ಮೊಹರಂಪದಗಳ ರಚನೆಕಾರರಾದ, ಹಾಡುಗಾರರಾದ ಕಲಬುರಗಿ ಜಿಲ್ಲೆಯ ಜೋಡಿ ಗೆಳೆಯರಾದ ಶ್ರೀ ಬಸವಂತರಾಯ ಮತ್ತು ಕರೀಂಸಾಬ ಅವರು ಅಭಿಪ್ರಾಯ ಪಡುತ್ತಾರೆ ಅಂದರೆ ಮೊಹರಂ ಪದಗಳ ರೀತಿ–ನೀತಿ ಎಂತಹದ್ದು ಎಂದು ನಮಗೆ ಅರಿವಾಗದೆ ಇರುವುದಿಲ್ಲ.

**ಮೊಹರಂ ಪದಗಳು ಸರ್ವವಿಷಯವನ್ನು ವ್ಯಾಪಿಸಿವೆ.**

ಧಾರ್ಮಿಕ ಆಚರಣೆಯ ಹಿನ್ನಲೆಯನ್ನು ತಿಳಿಸುವ ಅನೇಕ ಹಾಡುಗಳಲ್ಲಿ ಮೊಹರಂ ಹಬ್ಬದ ಚಾರಿತ್ರಿಕ ಹಿನ್ನೆಲೆ ಭಕ್ತಿ–ಭಾವದ ಸಮರ್ಪಣೆ, ಭಕ್ತರ ಹರಕೆಗೆ ಸ್ಪಂದಿಸುವ ಭಗವಂತ ತನ್ನ ವೇಷ–ಮರೆಸಿ ಫಕೀರನಾಗಿ ಬಂದ ಭಕ್ತರನ್ನು ಪರೀಕ್ಷಿಸುವ ರೀತಿ ಆ ಹಾಡುಗಳನ್ನು ಕೇಳಿಯೇ ಆನಂದಿಸಬೇಕು. ಮೊಹರಂ ಪದಗಳ ಹಾಡುಗಾರರಂತು ಆ ದೃಶ್ಯಗಳನ್ನು ಕಣ್ಮುಂದೆ ನಡೆದಂತೆಯೇ ಹಾಡುತ್ತಾರೆ.

ಸಾಮಾಜಿಕ ಮೌಲ್ಯಗಳು ಮಾಯವಾಗುತ್ತಿರುವುದರ ಬಗೆಗಿನ ಕಳವಳಗಳು ಮೊಹರಂ ಪದಗಳಲ್ಲಿ ಅಭಿವ್ಯಕ್ತಗೊಳ್ಳುತ್ತವೆ ತಂದೆ–ತಾಯಿಯರನ್ನು ಮರೆತು ಬಾಳುವ ಮಕ್ಕಳು ಸಂಸ್ಕೃತಿ ಮರೆತು ಆಧುನಿಕತೆ ಒಟ್ಟಿಕೊಂಡು ಯುವ ಜನತೆಗೆ ಪಾಠದ ಹಾಡುಗಳು ನಾಗಾಲೋಟದ ಎಚ್ಚರಿಕೆ ನೀಡುತ್ತವೆ.

ಸಾಮಾಜಿಕ ವಿಪತ್ತುಗಳು, ಪ್ರಕೃತಿ ವಿಕೋಪಗಳಂತು ಕಣ್ಣಿಗೆ ಕಟ್ಟಿದಂತೆ ವರ್ಣಿಸುವ ಮೊಹರಂ ಪದಗಳು ನಾಡಿನೆಲ್ಲೆಡೆ ದೇಶದಲ್ಲೆಡೆ ಹೆಸರುವಾಸಿಯಾಗಲು ಕಾರಣ ಅವುಗಳ ದಾಟಿ, ಭೂಕಂಪ, ಸುನಾಮಿ ಕರೋನಾದಂಥಹ ಜೀವ–ಆಸ್ತಿ–ಪಾಸ್ತಿ ನಷ್ಟದ ದುರ್ಘಟನೆ ಸಂದರ್ಭದಲ್ಲು ಹಾಡುಗಳು ಹಾಡಿ ಜನರಿಗೆ ಮನಮುಟ್ಟುಂತೆ ತಿಳಿಸಿ ಬದುಕಿನ ಅವಧಿಯಲ್ಲಿ ಒಳಿತಾಗುವ ಕಾರ್ಯಮಾಡಿ ಎಂದು ತಿಳಿ ಹೇಳುತ್ತವೆ.

ನಮ್ಮ ದೇಶದ ಸಂಸ್ಕೃತಿಯೇ? ಹಾಗೆಯೇ ನಾವು ಅನೇಕತೆಯಲ್ಲಿ ಏಕತೆ ಹೊಂದಿರುವ ದೇಶ ಭಾರತ ಸಂವಿಧಾನವು ಸರ್ವಜನರಿಗೂ ಸಮಾನತೆಯ ಹಕ್ಕು ನೀಡುವುದರ ಮೂಲಕ ಆಯಾಯ ಮತ–ಧರ್ಮಗಳ ಆಚರಣೆಯ ವಿಷಯದಲ್ಲಿ ಮೂಕ್ತ ಸ್ವಾತಂತ್ರ್ಯವನ್ನು ನೀಡಿದೆ. ಎಲ್ಲರಿಗೂ ಅವರವರ ಇಷ್ಟದ ಉತ್ತಮ ಆಚರಣೆ ಹಬ್ಬ–ಹರಿದಿನಗಳು ಇದ್ದರು ಸಹ ಇಲ್ಲಿ ಒಂದೇ ಮತಬಾಂಧವರಿಗೆ ಯಾವೊಂದು ಹಬ್ಬಗಳು ಇಲ್ಲಿ ಸೀಮಿತವಾಗಿಲ್ಲ! ಎಂದರೆ ಅಚ್ಚರಿಯುಂಟಾಗುತ್ತದೆ.

ಹೌದು ಯಾವುದೇ ಮತ–ಧರ್ಮದ ಆಚರಣೆಗಳಿದ್ದರು ಅವುಗಳ ಆಚರಣೆಗೆ ನಾವು ಯಾವುದೇ ಅಡ್ಡಿ–ಆತಂಕಗಳು ನಿರಾಯಸವಾಗಿ ಆ ಹಬ್ಬಗಳ ಆಚರಣೆಗಳು ಮಹತ್ವಸಾರಲು ಮುಕ್ತ ಮನಸ್ಸಿನಿಂದ ಸ್ವಾಗತಿಸುತ್ತೇವೆ. ಎಲ್ಲಾ ಮತ–ಧರ್ಮಿಯರು ಒಂದೇ ಎಂದು ಸಾರುವ ಮೂಲಕ ನಾವು ಭಾರತೀಯರಾಗಿಯೇ ನಮ್ಮ ಹಬ್ಬಗಳನ್ನು ಆಚರಿಸುತ್ತೇವೆ. ಹಾಗಾಗಿಯೆ ಇಲ್ಲಿ ವಿಶ್ವದಲ್ಲೇ ಧರ್ಮಸಹಿಷ್ಣು ರಾಷ್ಟ್ರವಾಗಿ ನಮ್ಮ ಭಾರತ ದೇಶ

ಮೇಲ್ಪಂಕ್ತಿಯ ಸಾಲಿನಲ್ಲಿ ನಿಲ್ಲುತ್ತದೆ. ಕಾರಣ ಬೇರೆನು ಅಲ್ಲ ವಸುದೈವಕುಟುಂಬಕಂ ಕಲ್ಪನೆ ಧಾರ್ಮಿಕ ಸಹಿಷ್ಣುತ ಮನೋಭಾವ ಎಲ್ಲಾ ಧರ್ಮಿಯರನ್ನು ಜಾತಿ–ಜನಾಂಗಗಳನ್ನು ಒಂದಾಗಿಸಿ ಪರಸ್ಪರ ಶಾಂತಿ ಸೌಹರ್ದ ಏಕತೆ ಭಾವೈಕ್ಯತೆಯಿಂದ ಬಾಳಲು ಈ ಆಚಾರಣೆಗಳು ನಮಗೆ ಮಾರ್ಗದರ್ಶನ ನೀಡುತ್ತವೆ.

ಮೊಹರಂ ಆಚರಣೆಯ ಪರಧರ್ಮ ಸಹಿಷ್ಣುತೆ ಅರ್ಥೈಸಿಕೊಳ್ಳಲು ನಮಗೆ ಅನೇಕ ನಿದರ್ಶನಗಳು ಸಿಗುತ್ತವೆ. ಹಾಗಾಗಿ ಪರಧರ್ಮ ಸಹಿಷ್ಣುತೆ ಇಲ್ಲಿ ಏಕತೆ, ಐಕ್ಯತೆಯ ದಿಕ್ಸೂಚಿಯಾಗಿ ಕೆಲಸ ಮಾಡಿ ಭಾರತೀಯರ ಜೀವನದಲ್ಲಿ ಧಾರ್ಮಿಕ ಆಚರಣೆಗಳ ಸಾರ ತಿಳಿಸುತ್ತದೆ. ಸಾಂಸ್ಕೃತಿಕ ಮೌಲ್ಯಗಳ ಜೀವಂತಿಕೆಯು ಸಹ ಮೊಹರಂ ಪದಗಳಲ್ಲಿ ಕಾಣುತ್ತೇವೆ. ಸಂಸ್ಕೃತಿ ನಿಂತ ನೀರಲ್ಲ ಆಚರಣೆಯ ರೀತಿ ನೀತಿಗಳು ವೇಷ–ಭೂಷಣಗಳು ಬದಲಾಗಬಹುದು ಆದರೆ ಆಂತರಿಕ ಮೌಲ್ಯ ಒಂದೇ ಯಾಗಿರುತ್ತದೆ. ಅದು ಮೌಲ್ಯಗಳ ಮುಂದುವರಿಕೆ ಅಪಮೌಲ್ಯಗಳು ಕ್ಷೀಣಿಸುವಿಕೆ ಎಂದೇ ಹೇಳಬಹುದು.

ಹಾಗಾಗಿ ಸಂಸ್ಕೃತಿಯ ನೆಲಮೂಲವಾಗಿದೆ. ಪ್ರಕೃತಿಯ ನಿರ್ಮಿತ ಕೆಲವೊಂದು ಸಾಂಸ್ಕೃತಿಕ ವಿಭಿನ್ನತೆ ನಾವು ಮರೆಯುವ ಹಾಗಿಲ್ಲ. ಏಕೆಂದರೆ ನಮ್ಮದಲ್ಲದ ಆಚರಣೆಗಳು ನಮ್ಮದೇ ಸಂಸ್ಕೃತಿಯ ಪರಂಪರೆಯ ಪ್ರತೀಕ ಎಂದು ಭಾವಿಸಿ ಜನವರ್ಗ ಎಲ್ಲಾ ಸಾಂಸ್ಕೃತಿಗಳಲ್ಲಿ ಬೆರೆಯುವುದು ನಿಜಕ್ಕು ಅಚ್ಚರಿ ಉಂಟುಮಾಡುತ್ತದೆ.

ಪರಂಪರೆಯ ಮೌಲ್ಯಗಳನ್ನು ಹೊಸ ತಲೆಮಾರಿಗೆ ಪರಿಚಯಿಸುವ ಕ್ರಮ ನಾವಿಲ್ಲಿ ಕಾಣುತ್ತೇವೆ. ಜಗತ್ತು ಎಷ್ಟೆ ವೇಗದಲ್ಲಿ ಬದಲಾದರು ಸಂಸ್ಕೃತಿಕ ಆಚರಣೆ ಮತ್ತೆ–ಮತ್ತೆ ಐಕ್ಯತೆ ಭಾವೈಕ್ಯತೆ ಕಡೆ ನಮ್ಮ ತನು ಮನ ಕೇಂದ್ರಿಕರಿಸುವಂತೆ ಮಾಡುತ್ತವೆ. ಎಷ್ಟೋ ಊರುಗಳಲ್ಲಿ–ಕೇರಿಗಳಲ್ಲಿ ಎಲ್ಲಾ ಜನವರ್ಗಗಳು ಎಲ್ಲಾವನ್ನು ಮರೆತು ಮೊಹರಂ ಆಚರಣೆಯ ವಿಧಿ–ವಿಧಾನಗಳು ಒಂದಾಗಿ ಬೆರೆತು ಆಚರಿಸುವುದೆ ಸಂಸ್ಕೃತಿಕ ಜೀವಂತಿಕೆಯ ಮೌಲ್ಯಗಳನ್ನು ಪುನರುಚ್ಛರಿಸುತ್ತದೆ.

ಒಟ್ಟಾರೆ ಮೊಹರಂ ಪದಗಳು ಅವುಗಳ ಜೀವಂತಿಕೆ ನಾವು ಕೇಳಿದಾಗಲೆ ಅರಿವಾಗುವುದು ಮೊಹರಂ ಆಚಾರಣೆಯಲ್ಲಿ ಪಾಲ್ಗೊಂಡಾಗಲೇ ಮನದಟ್ಟಾಗುವುದು. ಹಿಂದು–ಮುಸ್ಲಿಂ ಭಾವೈಕ್ಯತೆಯ ಆಚಾರಣೆಯಲ್ಲಿನ ಈ ಹಾಡುಗಳು ಮಾನವ ಬದುಕಿಗೆ ನೆಲೆ, ಬೆಲೆ ತಂದುಕೊಡುವಂತೆ ಮಾಡಿದ ಸಫಲತೆ ಹಿಂದೆ ಶ್ರೀ ದಿ. ಕರೀಂಸಾಬ ಶ್ರೀ ಬಸವಂತರಾಯ ಗಾಯಕರು, ಲೇಖಕರನ್ನು ಮರೆಯುವಂತಿಲ್ಲ.

**ಪರಾಮರ್ಶನ/ಆಕರ ಗ್ರಂಥಗಳು**


- ಬಸವರಾಜ ಪೋಲಿಸ್ ಪಾಟೀಲ್. (2015). *ರಿವಾಯತ್ ಹಾಡುಗಳು.* ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ.
- ಬಸವಂತರಾವ್ ರೋಂಪಳ್ಳಿ. (2019). *ಪ್ರಸಿದ್ಧ ಮೊಹರಂ ಪದಗಳು.* ಗುರುಪ್ರಕಾಶನ.
- ಬೋರಲಿಂಗಯ್ಯ. ಹಿ.ಚಿ. (1996). *ಕರ್ನಾಟಕ ಜನಪದ ಕಲೆಗಳ ಕೋಶ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಚನ್ನಣ್ಣ ವಾಲೀಕರ್. (1982). *ಗುಲಬರ್ಗಾ ಜಿಲ್ಲೆಯ ಮೊಹರಂ ಪದಗಳು.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- ಮಹಮ್ಮದ್ ಅಬ್ದುಲ್ ಅನ್ಸಾರಿ. (2013). *ರಾಷ್ಟ್ರೀಯ ಭಾವೈಕ್ಯತೆ.* ಶಾಂತಿ ಪ್ರಕಾಶನ.
- ಫಕೀರ್ ಮಹ್ಮದ್ ಕಟ್ಪಾಡಿ. (2017). *ಉತ್ತರ ಕರ್ನಾಟಕದ ಸೂಫಿ ಸಂತರು.* ನ್ಯಾಶನಲ್ ಬುಕ್ ಟ್ರಸ್ಟ್.
- ಫಾಲಾಕ್ಷ. (2014). *ಸಮಗ್ರ ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ.* ಎಸ್.ಎಸ್. ಭಾವಿಕಟ್ಟಿ ಪ್ರಕಾಶನ.
- ರಹಮತ್ ತರೀಕೆರಿ. (2004). *ಸಾಂಸ್ಕೃತಿಕ ಅಧ್ಯಯನ.* ಅಭಿನವ ಪ್ರಕಾಶನ.